# ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ)

ನಂ. 5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು-560004.
ರಿ.ನಂ. 171/1928-29, ದೂರವಾಣಿ: 080-22425746
Email : ksksanga@gmail.com, Website : www.kuruhinasetty.sanga.org

ಕು.ಶೆ.ಕೇ.ಸಂ.ಕ್ರ.ಸಂ. : 62/2025-26 ದಿನಾಂಕ : 24-11-2025

ಸನ್ಮಾನ್ಯ ಸದಸ್ಯರೇ,

## 32ನೇ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆ

ದಿನಾಂಕ 20-12-2025ರ ಶನಿವಾರ ಬೆಳಗ್ಗೆ 10-00 ಘಂಟೆಗೆ ಕೇಂದ್ರ ಸಂಘದ ಅಧ್ಯಕ್ಷರಾದ ಶ್ರೀ ಬಿ. ಲಿಂಗೇಶ್ವರ್‌ರವರ ಅಧ್ಯಕ್ಷತೆಯಲ್ಲಿ ಪ್ರತಿಭಾ ಪುರಸ್ಕಾರ, ನೂತನ ನಾಮ ನಿರ್ದೇಶಕರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಹಾಗೂ ಮಧ್ಯಾಹ್ನ 12-00 ಗಂಟೆಗೆ 32ನೇ ಸರ್ವ ಸದಸ್ಯರ ಸಭೆಯನ್ನು "ಕುರುಹಿನಶೆಟ್ಟಿ ಕೇಂದ್ರ ಸಂಘ" ನಂ.5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, (ಹೊಸ ಪ್ರೌಢಶಾಲೆ ರಸ್ತೆ) ವಿಶ್ವೇಶ್ವರಪುರಂ, ಬೆಂಗಳೂರು-560004 ಆವರಣದಲ್ಲಿ ಏರ್ಪಡಿಸಲಾಗಿದೆ. ದಯಮಾಡಿ ಸಭೆಗೆ ಆಗಮಿಸಿ, ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ,
ಸಹಿ/-
(ಸಿ.ಎನ್. ಚಂದ್ರಶೇಖರ್)
ಪ್ರಧಾನ ಕಾರ್ಯದರ್ಶಿ

## ಕಾರ್ಯಕ್ರಮಗಳು

1) ಪ್ರಾರ್ಥನೆ
2) ಸ್ವಾಗತ
3) ದಿವಂಗತ ಸದಸ್ಯರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ
4) ದಿನಾಂಕ 20-12-2025ರ ಶನಿವಾರ ನಡೆಯುವ 32ನೇ ಸರ್ವಸದಸ್ಯರ ಕರೆಯೋಲೆಯನ್ನು ಓದಿ ದಾಖಲು ಮಾಡುವುದು.
5) ನೂತನ ಕಟ್ಟಡ ನಿರ್ಮಾಣ ಬಗ್ಗೆ.
6) ಸಂಘದ ನೂತನ ಕಟ್ಟಡಕ್ಕೆ ಬಿ.ಬಿ.ಎಂ.ಪಿ. ಅನುಮತಿ ನೀಡಿರುವ ಹಾಗೂ ರಾಜ್ಯ ಸರ್ಕಾರದ 2 ಕೋಟಿ ರೂ. ಅನುದಾನದ ಬಗ್ಗೆ.
7) 29-12-2024 ರಂದು ನಡೆದ ಸಂಘದ 31ನೇ ಸರ್ವಸದಸ್ಯರ ಸಭೆಯ ನಡಾವಳಿಯನ್ನು ದೃಢೀಕರಿಸುವುದು.
8) 2024-2025ನೇ ಸಾಲಿನ ವರದಿಗೆ ಅನುಮೋದನೆ.
9) ಲೆಕ್ಕ ಪರಿಶೋಧಕರಿಂದ ಪರಿಶೋಧನೆಯಾದ 2024-2025ನೇ ಸಾಲಿನ ಲೆಕ್ಕಪತ್ರಗಳನ್ನು ಅಂಗೀಕರಿಸುವುದು.
10) 2025-26ನೇ ಸಾಲಿನ ಅಂದಾಜು ಆಯ-ವ್ಯಯಗಳನ್ನು ಅಂಗೀಕರಿಸುವುದು.
11) ಡಾಣನಹಳ್ಳಿ ಮತ್ತು ರಾಮೇನಹಳ್ಳಿ ಜಮೀನಿನ ಬಗ್ಗೆ.
12) ಇತರೆ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ.
13) ವಂದನಾರ್ಪಣೆ.

### ವಿಶೇಷ ಸೂಚನೆ :

1. ಸಂಘದ ಲೆಕ್ಕಪತ್ರಗಳ ಬಗ್ಗೆ ಹಾಗೂ ಇನ್ನಾವುದಾದರೂ ವಿಷಯವನ್ನು ಸಭೆಯಲ್ಲಿ ಚರ್ಚಿಸ ಬೇಕೆಂದಿದ್ದರೆ ದಯಮಾಡಿ ದಿನಾಂಕ 15-12-2025 ರೊಳಗೆ ತಮ್ಮ ಹೆಸರು ಬರೆದು ಕಛೇರಿಗೆ ತಿಳಿಸತಕ್ಕದ್ದು.

2. ಸರ್ವಸದಸ್ಯರ ಸಭಾ ಪ್ರವೇಶಕ್ಕೆ ಗುರುತಿನ ಚೀಟಿ ಕಡ್ಡಾಯವಾದ್ದರಿಂದ ದಿನಾಂಕ 16-11-2025 ರವರೆಗೆ ಸಂಘದ ಸದಸ್ಯತ್ವ ಪಡೆದಿರುವ ಸದಸ್ಯರು ಗುರುತಿನ ಚೀಟಿಯೊಡನೆ ಬರಬೇಕಾಗಿ ಕೋರಲಾಗಿದೆ. ಗುರುತಿನ ಚೀಟಿ ಪಡೆಯದೆ ಇರುವ ಸದಸ್ಯರು ತಮ್ಮ ಇತ್ತೀಚಿನ ಅಂಚೆ ಚೀಟಿ ಅಳತೆಯ 2 ಭಾವಚಿತ್ರಗಳನ್ನು ಕೇಂದ್ರ ಸಂಘಕ್ಕೆ ನೀಡಿ ಗುರುತಿನ ಚೀಟಿಯನ್ನು ಸರ್ವಸದಸ್ಯರ ಸಭೆಯ ಮುನ್ನವೇ ಪಡೆಯತಕ್ಕದ್ದು.

3. ದಿನಾಂಕ 29-12-2024 ರಂದು 31ನೇ ಸರ್ವಸದಸ್ಯರ ಸಭೆಯ ನಡಾವಳಿ ಮತ್ತು ಸಂಘದ 2024-25 ನೇ ಸಾಲಿನ ವರದಿ ಆಡಿಟ್ ಆದ ಲೆಕ್ಕಪತ್ರ ವಿವರಗಳ ಮುದ್ರಿತ ಪುಸ್ತಕವನ್ನು ದಿನಾಂಕ 10-12-2025 ರಿಂದ ಕೇಂದ್ರ ಸಂಘದ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (ವರದಿ ಪುಸ್ತಕಗಳನ್ನು ಸಮಾಜದ ಸ್ಥಳೀಯ ಸಂಘ / ಸಂಸ್ಥೆಗಳಿಗೂ ಕಳುಹಿಸಿ ಕೊಡಲಾಗಿದ್ದು ಅಲ್ಲಿಯೂ ಸಹ ಪರಾಮರ್ಶಿಸಬಹುದು.)

4. ಕಾರ್ಯಕ್ರಮದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಹಾಗೂ ಯೋಜಿತ ರೀತಿಯಲ್ಲಿ ನಿರ್ವಹಿಸುವ ಸಲುವಾಗಿ ರೂಪಿಸಿರುವ ಮೇಲ್ಕಂಡ ಸೂಚನೆಗಳ ಪರಿಪಾಲನೆಗೆ ಸದಸ್ಯರು ಸಹಕರಿಸಬೇಕೆಂದು ಪ್ರಾರ್ಥನೆ.

**ಕುರುಹಿನಶೆಟ್ಟಿ ಕೇಂದ್ರ ಸಂಘ (ರಿ.)**

# 5, "ಸಾಕಮ್ಮ ಭವನ", ದ್ವಾರಕಾನಾಥ್ ರಸ್ತೆ, (ಹೊಸ ಪ್ರೌಢಶಾಲೆ ರಸ್ತೆ),
ವಿಶ್ವೇಶ್ವರಪುರಂ, ಬೆಂಗಳೂರು

5 6 0 0 0 4




**ಕುರುಹಿನಶೆಟ್ಟಿ ಕೇಂದ್ರ ಸಂಘದ ಆವರಣದಲ್ಲಿ ನೂತನ ಸಾಕಮ್ಮ ಭವನದ ನಿರ್ಮಾಣಕ್ಕಾಗಿ ಸಮಸ್ತ ಕುಲಬಾಂಧವರು ಹೆಚ್ಚಿನ ಧನ ಸಹಾಯ ಮಾಡುವಂತೆ ಈ ಮೂಲಕ ತಮ್ಮಲ್ಲಿ ಮನವಿ ಮಾಡುತ್ತೇವೆ.**

**– ಬಿ. ಲಿಂಗೇಶ್ವರ್, ಅಧ್ಯಕ್ಷರು**